## ಕಳೆದ ಸಂಚಿಕೆಯಲ್ಲಿ



ಆಭರಣ ವ್ಯಾಪಾರಿ ಕರುಣಾಕರನ್‌ರ ಮನೆಯಲ್ಲಿ ಕ್ರಾಂತಿ ರೆಡ್ಡಿ ಎದುರಿಗೆ ರಾಜಕಾರಣ ಮತ್ತು ಮಾನವೀಯ ಜಗತ್ತುಗಳ ಹೊಸ ಜಗತ್ತೊಂದು ತೆರೆದುಕೊಂಡಿತು. ಪ್ರವಾಹಪೀಡಿತ ಪ್ರದೇಶಗಳಿಂದ ಸಾವುನೋವಿನ ವರದಿಗಳು ಬರುತ್ತಿರುವ ಸಂದರ್ಭದಲ್ಲೇ, ಕಾರ್ಮಿಕ ನಾಯಕ ನೆಲ್ಸನ್ ಮತ್ತು ಕನ್ಯಾಕುಮಾರಿಯ ಅಚ್ಯುತನ್ ನಂಬಿಯಾರ್ ಪ್ರವಾಹಕ್ಕೆ ಬಲಿಯಾದ ಸುದ್ದಿಯೂ ಬಿತ್ತರಗೊಂಡಿತು. ಕಾರ್ಮಿಕ ನಾಯಕನ ಆಕಸ್ಮಿಕ ಸಾವು ಕೆ.ಎಮ್. ನಯ್ಯಾರ್ ಅವರಿಗೆ ಸಂತಸ ತಂದಿದ್ದನ್ನು ಕ್ರಾಂತಿ ರೆಡ್ಡಿ ಗಮನಿಸಿದ. ನೆಲ್ಸನ್ ಮತ್ತು ನಂಬಿಯಾರ್ ಪ್ರವಾಹದಿಂದ ಸಾಯದೆ, ಕೊಲೆಗೀಡಾಗಿರಬಹುದು ಎನ್ನುವ ಮಾತುಗಳೂ ಕೇಳಿಬರತೊಡಗಿದವು. ಈ ವೈರುಧ್ಯಗಳನ್ನು ಅರಗಿಸಿಕೊಳ್ಳುತ್ತಿರುವಾಗಲೇ, ವಿಮಾನಸಂಚಾರ ಮತ್ತೆ ಆರಂಭಗೊಂಡಿರುವ ಸುದ್ದಿ ತಲುಪಿತು. ಕ್ರಾಂತಿ ರೆಡ್ಡಿ ಕೇರಳವನ್ನು ಬೀಳ್ಕೊಂಡು ದೆಹಲಿಗೆ ಹೊರಡಲು ಅಣಿಯಾಗತೊಡಗಿದ.

ಬಂದು ಫೋನ್ ಮಾಡ್ತೀನಿ' ಎಂದವರಿಗೆ, 'ಯಾವುದಕ್ಕೂ ರಾತ್ರಿಯೊಳಗೆ ಫೋನ್ ಮಾಡ್ತೀನಿ' ಎಂದು ಫೋನ್ ಇಟ್ಟಿದ್ದೆ. ಕೂಡಲೇ ಸಿಂಧೂ ಮೆನನ್ ನೆನಪಾಗಿದ್ದಳು. ಅವಳು ನೋಡಿಕೊಳ್ಳುತ್ತಿರುವ ಪೇಶೆಂಟ್ ಸುತ್ತ ಕ್ರಿಮಿನಲ್ ಸರ್ಕಲ್ ಸುತ್ತಿಕೊಂಡಿದಿಯೆಂದು ಹೇಳಿದ್ದು ಕೂಡಾ ನೆನಪಾಗಿ, ಅಣ್ಣ ಇನ್ವೆಸ್ಟಿಗೇಷನ್ ಮಾಡುತ್ತಿರುವ ಕೇಸಿಗೂ ಆಮ್ರಪಾಲಿ ಟ್ರೀಟ್ಮೆಂಟ್ ಕೊಡುತ್ತಿರುವ ಪೇಶೆಂಟ್‌ಗೂ ಸಂಬಂಧವಿರಬಹುದೆ ಎಂಬ ಯೋಚನೆ ಥಟ್ಟನೆ ಮನಸ್ಸಿನಲ್ಲಿ ಮೂಡಿತ್ತು.

ಮಸ್ಸೂರಿಗೆ ಹೋದರೆ ಅಣ್ಣ ಮತ್ತು ಸಿಂಧೂ ಮೆನನ್ ಇಬ್ಬರನ್ನೂ ಭೇಟಿಯಾಗಿ ಬರಬಹುದೆಂದು ಅಂದುಕೊಳ್ಳುತ್ತಿರುವಾಗಲೇ ರಾಘವರೆಡ್ಡಿಯಿಂದ ಫೋನ್ ಬಂದಿತ್ತು. 'ಏನು, ಸ್ವಲ್ಪ ನಿದ್ದೆ ತೆಗೆದೆಯಾ?. ಒಂದೂವರೆಗೆ ಬರ್ತಿದ್ದೀವಿ, ನಮ್ಮ ಎಂಪಿ ಸಿಗಲೇ ಇಲ್ಲ. ಎರಡು ದಿನ ರೆಸ್ಟ್ ಮಾಡಲು ನೈನಿತಾಲಿಗೆ ಹೋಗಿದ್ದಾರಂತೆ. ಅದೂ ಯಾರ ಜೊತೆ ಗೊತ್ತಾ? ಅವರ ಕ್ಷೇತ್ರದ ಜಿಲ್ಲಾ ಪರಿಷತ್ ಅಧ್ಯಕ್ಷೆಯೊಂದಿಗೆ. ಆಕೆಯನ್ನು ಅಧ್ಯಕ್ಷೆಯನ್ನಾಗಿ ಮಾಡಿದ್ದು ಎಂಪಿಯವರೇನಂತೆ. ನೋಡಲು ನಮ್ಮ ತೆಲುಗು ನಟಿ ಜಯಪ್ರದ ಇಲ್ವಾ... ಆಕೆಗಿಂತ್ಲೂ ಬ್ಯೂಟಿಫುಲ್ಲಾಗಿದಾಳಂತೆ. ಹಾಗಂತ ನಮ್ಮ ಕೊಂಡಯ್ಯ ಅಣ್ಣ ಹೇಳ್ತಿದ್ದ. ಇನ್ನೊಂದು ವಿಚಿತ್ರ ಸಂಗತಿ ಗೊತ್ತಾ? ನಮ್ಮ ಎಂಪಿಯವರು ಅಧ್ಯಕ್ಷೆಯೊಂದಿಗೆ ತಮ್ಮ ಹೆಂಡತಿಯನ್ನೂ ಕರೆದುಕೊಂಡು ಹೋಗಿದ್ದಾರಂತೆ. ಎಲ್ಲಿ ಹೋದ್ರೂ ಮೂವರೂ ಜೊತೆಯಲ್ಲೇ ಹೋಗ್ತಾರಂತೆ, ಜೊತೆಯಲ್ಲೇ ಮೂವರೂ ಒಟ್ಟಿಗೆ ಉಳಿದುಕೊಳ್ತಾರಂತೆ. ನಮ್ಮ ಎಂಪಿಯವರು ಏಳೇಳು ಜನ್ಮಗಳ ಪುಣ್ಯ ಮಾಡವ್ರೆ ಎಂದು ಕೊಂಡಯ್ಯ ಹೊಟ್ಟೆಕಿಚ್ಚಿನಿಂದ ಹಲುಬುತ್ತಿದ್ದಾರೆ. ಕೊಂಡಯ್ಯನವರಿಗೆ ಕೋಪವೇಕೆಂದರೆ, ರಾತ್ರಿ ಕೊಂಡಯ್ಯ ಫೋನ್ ಮಾಡಿದಾಗ ಎಂಪಿಯವರು ಇವೊತ್ತು ಊಟಕ್ಕೆ ಮನೆಗೇ ಬರಹೇಳಿದ್ರಂತೆ. ಕೊಂಡಯ್ಯ ಈಗ ಫೋನ್ ಮಾಡಿದಾಗ, 'ಕೊಂಡಯ್ಯ ನಾನು ರಾತ್ರಿ ಸಿಕ್ಕಾಪಟ್ಟೆ ಕುಡಿದು ಬಿಟ್ಟಿದ್ದೆ. ಹೆಂಡತಿ, ಪ್ರೇಯಸಿ ಇಬ್ಬರೂ ಪ್ರೀತಿಯಿಂದ ಕುಡಿಸಿದಾಗ ಬೇಡ ಅನ್ನೋದಕ್ಕೆ ಸಾಧ್ಯವಾ? ಕುಡಿದ ಮತ್ತಿನಲ್ಲಿ ನಾನು ದಿಲ್ಲಿಯಲ್ಲೇ ಇರುವೆನೆಂದುಕೊಂಡು ನಿನಗೆ ಹಾಗೆ ಹೇಳಿಬಿಟ್ಟಿದ್ದೆ. ಸಾರಿ, ಮುಂದಿನವಾರ ಬಾ ನಮ್ಮ ಮನೆಯಲ್ಲೇ ಉಳಿದುಕೊಳ್ಳುವೆಯಂತೆ' ಎಂದು ನಕ್ಕಿದ್ದರಂತೆ. 'ಸುಖ ಅಂದ್ರೆ ಇದೇ ಅಲ್ವಾ' ಎಂದು ಫೋನ್ ಇಟ್ಟಿದ್ದ ರಾಘವರೆಡ್ಡಿ.

ಸಮಯ ಒಂದು ಗಂಟೆಯನ್ನು ಮೀರಿತ್ತು. ಇನ್ನರ್ಧ ಗಂಟೆಯಲ್ಲಿ ರಾಘವರೆಡ್ಡಿ ಮತ್ತು ಕೊಂಡಯ್ಯ ಬರುವವರಿದ್ದರು. ವಾರದಿಂದ ನನಗೆ ಪ್ರಿಯವಾದ ಮುದ್ದೆ ತಿನ್ನದಿದ್ದ ಕಾರಣ ನಾಲಿಗೆ, ದೇಹಗಳೆರಡೂ ಮುದ್ದೆಯನ್ನು ಬಯಸುತ್ತಿದ್ದವು. ರಿಸೆಪ್ಷನ್‌ಗೆ ಇಂಟರ್ ಕಾಮ್‌ನಲ್ಲಿ ಕಾಲ್ ಮಾಡಿ ಆ ಬಗ್ಗೆ ವಿಚಾರಿಸಿದ್ದೆ. ಮುದ್ದೆಯ ಜೊತೆಗೆ ನಾಟಿ ಕೋಳಿ ಸಾರು, ಮೀನಿನ ಹುಳಿ ಮತ್ತು ಮಟನ್ ಚಾಪ್ಸ್ ಲಭ್ಯವಿರುವುದಾಗಿ ತಿಳಿದು ಬಂದಿತ್ತು. ರೂಮಿಗೆ ಬೇಕಾದರೂ ಸಪ್ಲೈ ಮಾಡುವುದಾಗಿ ತಿಳಿಸಿದ್ದರು. ಮತ್ತೆ ಫೋನ್ ಮಾಡಿ ತಿಳಿಸುವುದಾಗಿ ಫೋನ್ ಇಟ್ಟಿದ್ದೆ. ವಿಕ್ರಮ್ ರೆಡ್ಡಿ ಅಣ್ಣನ ಮಾತುಗಳು ಮತ್ತೆ ನೆನಪಾಗಿ ಮೈ ಬಿಸಿಯಾದಂತಾಯ್ತು. ಆಶಾ ಬೆಂಗತಮಲೆಯ ಬಳಿ ನಾನು ಯಾರ ಜೊತೆಗೆ ಫಿಸಿಕಲ್ ರಿಲೇಷನ್ ಇಟ್ಟುಕೊಂಡಿರುವ ಬಗ್ಗೆ ಸಾಕ್ಷ್ಯಾಧಾರಗಳಿರಬಹುದು? ನನಗೆ ಕನ್‌ಫ್ಯೂಸ್ ಆಗಿತ್ತು. ನಾನು ಕೆಲವೇ ಕೆಲವರೊಡನೆ ದೈಹಿಕ ಸುಖ ಅನುಭವಿಸಿದ್ದು ಅತ್ಯಂತ ರಹಸ್ಯದ ಸಂಗತಿಯೇ ಆಗಿತ್ತು. ಅಷ್ಟರಲ್ಲಿ ರಾಘವರೆಡ್ಡಿಯ ಫೋನ್ ಬಂದಿತ್ತು. ತಾವು ರೂಮಿಗೆ ಹಿಂತಿರುಗಿರುವುದಾಗಿ ಹೇಳಿ ಅವರ ರೂಮಿಗೇ ನನ್ನನ್ನೂ ಊಟಕ್ಕೆ ಬರಹೇಳಿದ್ದರು. ಅಂತೆಯೇ ಅವರ ರೂಮಿಗೆ ಹೋಗಿದ್ದೆ. ಸಂಜೆ ಆರೂವರೆ ಗಂಟೆಗೆ ಕೊಂಡಯ್ಯನವರ ಫ್ಲೈಟ್ ಇತ್ತು. ಹಾಗಾಗಿ ಮೂರೂವರೆ ಗಂಟೆಗೆಲ್ಲಾ ಅವರು ಹೊರಡಬೇಕಾಗಿತ್ತು. ನಾನು ಮುದ್ದೆ ಊಟವನ್ನು ಮಾಡಿದ್ದೆ. ಅವರು ಮುದ್ದೆ ಜೊತೆ ಫಿಶ್ ಕರಿ ರೈಸ್ ಹೇಳಿದ್ದರು. ಊಟದೊಂದಿಗೆ ವೈನನ್ನೂ ಕುಡಿದಿದ್ದರು.

ಕೊಂಡಯ್ಯನವರನ್ನು ಏರ್‌ಪೋರ್ಟ್‌ಗೆ ಡ್ರಾಪ್ ಮಾಡಲು ರಾಘವರೆಡ್ಡಿಯೊಂದಿಗೆ ನಾನು ಸಹ ಹೊರಟಿದ್ದೆ. 'ಈ ನಮ್ಮ ಕೊಂಡಯ್ಯ ಅಣ್ಣ ಖಂಡಿತವಾಗಿಯೂ ನಮ್ಮ ದೇಶದ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರು. ಅವರು ಎಷ್ಟು ಬಡವರ ಮದುವೆಗಳನ್ನು ಮಾಡಿರುವರೋ, ಎಷ್ಟು ಬಡವರ ವಿದ್ಯಾಭ್ಯಾಸಕ್ಕೆ ನೆರವು ನೀಡಿದ್ದಾರೋ, ತಾಲ್ಲೂಕಿನ ಎಷ್ಟು ವಸತಿಹೀನರಿಗೆ ಮನೆಗಳನ್ನು ಕಟ್ಟಿಕೊಟ್ಟಿದ್ದಾರೋ ಲೆಕ್ಕಕ್ಕಿಲ್ಲ. ಕಷ್ಟ ಎಂದು ಬಂದವರನ್ನು ಅಣ್ಣ ಎಂದೂ ಬರಿಗೈಯಲ್ಲಿ ಕಳಿಸಿದವರಲ್ಲ. ಇನ್ನು ಪವರ್ ಇದೆಯೆಂದು ಯಾರನ್ನೂ ಯಾವೊತ್ತೂ ಉದಾಸೀನವಾಗಿ ಮಾತನಾಡಿದವರೂ ಅಲ್ಲ. ಇಷ್ಟು ಒಳ್ಳೆಯ ಮನುಷ್ಯನಿಗೆ ಹಿಂದಿನ ಜನ್ಮದಲ್ಲಿ ಮಾಡಿದ ತಪ್ಪಿಗೆ ಈ ಜನ್ಮದಲ್ಲಿ ದೇವರು ಶಿಕ್ಷೆ ಕೊಡಬಹುದಾ' ಎಂದು ನನ್ನ ಕಡೆ ನೋಡುತ್ತಾ ಮಾತನಾಡಿದ್ದ ರಾಘವರೆಡ್ಡಿ. ಕೊಂಡಯ್ಯ ಅರೆಗಣ್ಣಿನಲ್ಲಿ ನನ್ನನ್ನೊಮ್ಮೆ, ರಾಘವರೆಡ್ಡಿಯನ್ನೊಮ್ಮೆ ನೋಡುವುದು, ಕ್ಷಣಕಾಲ ಕಣ್ಣು ಮುಚ್ಚಿ ನಿದ್ದೆಹೋದಂತೆ ಮಾಡುತ್ತಿದ್ದರು. 'ಡೈವೋರ್ಸ್ ಕೊಟ್ಟು ಕೈ ತೊಳೆದುಕೊಂಡರೆ ಆಯ್ತು. ಹೀಗೆ ಎಷ್ಟು ದಿನ ಬದುಕೋದು. ಎಗ್ಸಾಂಪಲ್ ನನ್ನನ್ನೇ ತೆಗೆದುಕೊಳ್ಳಿ, ಐದು ವರ್ಷಗಳಿಂದ ಪ್ರಯತ್ನಪಟ್ಟರೂ ಇಬ್ಬರಿಗೂ ಜೊತೆಯಲ್ಲಿ ಹೊಂದಾಣಿಕೆಯಿಂದ ಬದುಕಲು ಸಾಧ್ಯವೇ ಆಗಲಿಲ್ಲ. ಹಾಗಾಗಿ ಇಬ್ಬರೂ ಮ್ಯೂಚುವಲ್ ಡೈವೋರ್ಸ್ ಅಗ್ರಿಮೆಂಟ್‌ಗೆ ಸಹಿ ಮಾಡಿದ್ರೆ ಮುಗೀತು' ಎಂದ ನನ್ನ ಮಾತುಗಳಿಗೆ ಕೊಂಡಯ್ಯ ಪಿಳಿ ಪಿಳಿ ಕಣ್ಣು ಬಿಟ್ಟು ನೋಡಿದ್ದರು. 'ನಿನ್ನ ಕೇಸ್ ಬೇರೆ, ಅಣ್ಣನ ಕೇಸ್ ಬೇರೆ. ನಿನಗಂತೂ ಮಕ್ಕಳು ಮರಿ ಇಲ್ಲ. ಅಣ್ಣನಿಗೆ ಮೂರು ಜನ ಹೆಣ್ಣುಮಕ್ಕಳು. ಅದೂ ಅಲ್ಲದೆ ಅಣ್ಣ ಇವೊತ್ತು ಈ ಪೊಸಿಷನ್‌ಗೆ ಬರಬೇಕಾದ್ರೆ ರಾಯಲುಸೀಮಾದ ರಾವಣನಂಥ ಮಾವನವರೇ ಕಾರಣ. ಅಣ್ಣನಿಗೆ ದುಶ್ಶಾಸನ, ದುರ್ಯೋಧನನಂಥ ಇಬ್ಬರು ಭಾವಂದಿರಿದ್ದಾರೆ. ಡೈವೋರ್ಸ್ ಸುದ್ದಿ ಎತ್ತಿದರೆ ಅಣ್ಣನ ಕೈಕಾಲು ಮುರಿದು ಹುಸೇನ್ ಸಾಗರದಲ್ಲಿ ಎಸೆಯುತ್ತಾರಷ್ಟೆ'. ರಾಘವರೆಡ್ಡಿಯ ಮಾತುಗಳಲ್ಲಿ ತಮಾಷೆಯ ಲೇಪನವಿದ್ದರೂ ವ್ಯಂಗ್ಯವಂತೂ ಇರಲಿಲ್ಲ ಅನ್ನಿಸಿತು.

'ಹಾಗಾದ್ರೆ ಬೇರೆ ದಾರಿಯೇ ಇಲ್ಲ, ಬಂದಿದ್ದನ್ನು ಹಾಗಾಗೇ ಅನುಭವಿಸಬೇಕು, ಇಲ್ಲ ಆತ್ಮಹತ್ಯೆ ಮಾಡಿಕೊಳ್ಳಬೇಕು' ನಾನೂ ಸ್ವಲ್ಪ ತಮಾಷೆ ಬೆರೆಸಿ ಮಾತನಾಡಿದ್ದೆ. 'ಥೂ ಬಿಡ್ತು ಅನ್ನಿ, ಅಣ್ಣನಿಗೆ ಕನಸಿನಲ್ಲೂ ಅಂಥ ಕೆಟ್ಟ ಆಲೋಚನೆ ಬರೋದಿಲ್ಲ. ಎಷ್ಟು ಕಷ್ಟ ಬಂದರೂ ಅಣ್ಣ ತಮ್ಮ ದೇಹಕ್ಕೆ ಬೇಕಾಗೋವಷ್ಟು ಸುಖವನ್ನು ಪಡೆದುಕೊಂಡೇ ತೀರ್ತಾರೆ' ಎಂದು ರಾಘವರೆಡ್ಡಿ, ಕೊಂಡಯ್ಯನವರನ್ನು ತಾರೀಫು ಮಾಡಿದ್ದ. ಏರ್‌ಪೋರ್ಟ್‌ನಲ್ಲಿ ಕೊಂಡಯ್ಯನವರನ್ನು ಡಿಪಾರ್ಚರ್ ಗೇಟ್ ಹತ್ತಿರ ಬಿಟ್ಟು ಟಾಟಾ